# ವಿಯೆಟ್ನಾಂನಲ್ಲಿ ಕಚ್ಚಾ ಗೋಡಂಬಿಯ ಕೊರತೆ

ಈ ವರ್ಷದ ಇನ್ನುಳಿದ ತಿಂಗಳುಗಳಲ್ಲಿ ವಿಯೆಟ್ನಾಂನ ಗೋಡಂಬಿ ತಿರುಳು ರಫ್ತು ಇಳಿಕೆ ಕಾಣುವ ಸಂಭವವಿದೆ. ಈ ವರ್ಷದ ಪ್ರಥಮ ಒಂಭತ್ತು ತಿಂಗಳುಗಳಲ್ಲಿ ವಿಯೆಟ್ನಾಂನ ಗೋಡಂಬಿ ತಿರುಳು ರಫ್ತು ಗಾತ್ರದಲ್ಲಿ 9.6 ಶೇಕಡಾ ಹೆಚ್ಚಳವಾಗಿ 215000 ಟನ್ ರಫ್ತು ಮಾಡಿ 1.56 ಬಿಲಿಯನ್ ಅಮೇರಿಕನ್ ಡಾಲರ್ (22.6 ಶೇಕಡಾ ವೃದ್ಧಿ) ಗಳಿಸಿದೆ.

ವಿಯೆಟ್ನಾಂನ ಗೋಡಂಬಿ ಕಾರ್ಖಾನೆಗಳು ಸಂಸ್ಕರಣೆಗೆ ಕಚ್ಚಾ ಗೋಡಂಬಿಯ ತೀವ್ರ ಕೊರತೆಯನ್ನೇದುರಿಸುತ್ತಿದೆಯೆಂದು ವಿನ್‌ಕಪ್ ಹೇಳಿದೆ. 50 ಶೇಕಡಾ ಗೋಡಂಬಿ ತಿರುಳು ತಯಾರಿಕೆಯ ಸಣ್ಣ ಉದ್ದಿಮೆಗಳು ಕಚ್ಚಾ ಗೋಡಂಬಿಯ ಪೂರೈಕೆಯಲ್ಲಿದೆ ಉತ್ಪಾದನೆ ಕಡಿಮೆಯಾಗುತ್ತಿದೆ. ಅಲ್ಲದೆ ಈ ಮೊದಲು ಆಮದು ಮಾಡುತ್ತಿದ್ದ ಕಚ್ಚಾ ಗೋಡಂಬಿ ದರ ಟನ್‌ಗೆ ರೂ.7000 ಅಮೇರಿಕನ್ ಡಾಲರ್ ದರವಿತ್ತು. ಈಗ ದರ 1300–1400 ಡಾಲರ್‌ಗಳಿಗೇರಿದೆ. ಅಲ್ಲಿನ ಕರೆನ್ಸಿ ಡಾಂಗ್ ಡಾಲರ್‌ಗೆದುರು ಅಸಮೌಲ್ಯಗೊಂಡಿರುವುದರಿಂದ ಆಮದುದಾರರು ಹೆಚ್ಚು ಹಣ ತೆರಬೇಕಾಗುತ್ತಿದೆ. ಇದರಿಂದ ಈ ವರ್ಷದ ಇನ್ನುಳಿದ ತಿಂಗಳುಗಳಲ್ಲಿ ಅಲ್ಲಿಂದ ಗೋಡಂಬಿ ತಿರುಳು ರಫ್ತು ಕಡಿಮೆಯಾಗಬಹುದೆನ್ನಲಾಗಿದೆ.